

ರಾಘವೇಂದ್ರ ಸ್ವಾಮೀಜಿ ತಪ್ಪಸ್ಸು ಮಾಡಿರುವ ಐತಿಹ್ಯ ಹೊಂದಿರುವ ರಾಯಚೂರು ಜಿಲ್ಲೆಯ ಪಂಚಮುಖಿ ಆಂಜನೇಯ ದೇವಸ್ಥಾನ





ಕ್ಷೇತ್ರಗಳಾಗಿದ್ದರಿಂದ ಮಂತ್ರಾಲಯಕ್ಕೆ ಬಂದವರು ಈ ಸ್ಥಳಗಳಿಗೂ ಹೋಗುವುದು ಸಾಮಾನ್ಯ.

## ಪಂಚಮುಖಿ ಆಂಜನೇಯ

ತುಂಗಭದ್ರಾ ನದಿಯ ಇನ್ನೊಂದು ಬದಿಗೆ ಸಮೀಪದಲ್ಲಿ ಪಂಚಮುಖಿ ಆಂಜನೇಯ ದೇವಸ್ಥಾನವಿದ್ದು, ಮಂತ್ರಾಲಯದಿಂದ 25 ಕಿ.ಮೀ. ದೂರದಲ್ಲಿದೆ. ಇದು ರಾಯಚೂರು ಜಿಲ್ಲೆಯ ವ್ಯಾಪ್ತಿಯಲ್ಲಿದ್ದು, ರಾಘವೇಂದ್ರ ಸ್ವಾಮಿಗಳು ಮಂತ್ರಾಲಯಕ್ಕೆ ತೆರಳುವ ಮೊದಲು 12 ವರ್ಷಗಳ ಕಾಲ ಈ ಪಂಚಮುಖಿ ಆಂಜನೇಯ ದೇವಸ್ಥಾನದಲ್ಲಿ ಧ್ಯಾನ ಮಾಡಿದ್ದರು ಎಂದು ಹೇಳಲಾಗುತ್ತದೆ. ಮಂತ್ರಾಲಯಕ್ಕೆ ಬರುವ ಬಹುತೇಕ ಭಕ್ತರು ಪಂಚಮುಖಿಗೆ ಭೇಟಿ ನೀಡುತ್ತಾರೆ.

ರಾಘವೇಂದ್ರ ಸ್ವಾಮಿಗಳು ಪಂಚಮುಖಿಯಲ್ಲಿ ತಪಸ್ಸು ಮಾಡಿದ ನಂತರ ಪಂಚಮುಖಿ ಆಂಜನೇಯ, ಕೊಲ್ಹಾಪುರ ಮಹಾಲಕ್ಷ್ಮಿ, ವೆಂಕಟೇಶ್ವರ ಮತ್ತು ವಿಷ್ಣು ವರಾಹ ರೂಪದಲ್ಲಿ ಕಾಣಿಸಿಕೊಂಡರು ಎಂದು ಹೇಳಲಾಗುತ್ತದೆ. ಬೆಟ್ಟದ ಮೇಲಿರುವ ಪಂಚಮುಖಿಗಳ ಆಂಜನೇಯನ ಒಡಮೂಡಿರುವ ಮೂರ್ತಿಯು ಹೆಸರೇ ಹೇಳುವಂತೆ ಐದು ಮುಖಗಳನ್ನು ಹೊಂದಿದೆ.

ದೇವಸ್ಥಾನದ ಕೆಳಗಿನ ಭಾಗದಿಂದ ಪ್ರದಕ್ಷಿಣೆ ಹಾಕಿಕೊಂಡು ಹೋಗುವಾಗ ಬೃಹತ್ ಆಕಾರದ ಕಲ್ಲಿನಲ್ಲಿ ವಿಮಾನದ ಆಕೃತಿ ಕಾಣುತ್ತದೆ. ಹಾಸಿಗೆ, ದಿಂಬು ಕಾಣುವುದರ ಜೊತೆಗೆ ಹೊದಿಕೆ ಹೊದ್ದುಕೊಂಡಂತಹ ಆಕೃತಿ ಕೂಡ ದೊಡ್ಡ ಕಲ್ಲಿನಲ್ಲಿರುವುದು ಇಂದಿಗೂ ಕಾಣುವ ವಿಶೇಷ. ದೇವಾಲಯದ ಹೊರಗೆ ಜೋಡಿ ಪಾದರಕ್ಷೆಗಳಿದ್ದು, ಇದನ್ನು ಜನರು ಆಂಜನೇಯನ ಪಾದಗಳೆಂದು ನಮಸ್ಕರಿಸುತ್ತಾರೆ.

## ಎಲೆ ಬಿಚ್ಚಾಲಿ

ಮಂತ್ರಾಲಯದಿಂದ ಅಂದಾಜು 25 ಕಿ.ಮೀ. ದೂರದಲ್ಲಿರುವ ಎಲೆ ಬಿಚ್ಚಾಲಿ ಎನ್ನುವ ಪುಟ್ಟ ಗ್ರಾಮದ ಹೊರವಲಯದ ತುಂಗಭದ್ರಾ ನದಿ ತೀರದಲ್ಲಿ ರಾಘವೇಂದ್ರ ಸ್ವಾಮಿಗಳು 12 ವರ್ಷಗಳ ಕಾಲ ಕಳೆದಿದ್ದಾರೆ.

ವೇದ ಹಾಗೂ ಉಪನಿಷತ್ತುಗಳನ್ನು ಆಳವಾಗಿ ಅಧ್ಯಯನ ಮಾಡಿ ವಿದ್ವಾಂಸರಾಗಿದ್ದ ಅಪ್ಪಣ್ಣಾಚಾರ್ಯರು ತಮ್ಮ ಬಳಿ ಬರುತ್ತಿದ್ದ ವಿದ್ಯಾರ್ಥಿಗಳಿಗೆ ಸನ್ಯಾಸಿಗಳ ಜೀವನದ ಕಷ್ಟದ ಅರಿವು ಮೂಡಿಸಲು ಬಗಲಿಗೆ ಜೋಳಿಗೆ ಹಾಕಿಕೊಂಡು ಭಿಕ್ಷೆ ಬೇಡಿ ಬರಬೇಕು ಎಂದು ಹೇಳಿದರು. ಶಿಷ್ಯರು ತರುತ್ತಿದ್ದ ಅಕ್ಕಿಯನ್ನು ಬಟ್ಟೆಯಲ್ಲಿ ಕಟ್ಟಿ ಹತ್ತಿರದಲ್ಲಿರುವ ಅಂಟಿನ ಮರದ ಕೊಂಬೆಯೊಂದಕ್ಕೆ ಕಟ್ಟಿದರು. ಇದಾದ ಸ್ವಲ್ಪ ಸಮಯದಲ್ಲೇ ಅಕ್ಕಿಯು ಅನ್ನವಾಯಿತು. ಅಷ್ಟರಲ್ಲಿ ಅಪ್ಪಣ್ಣಾಚಾರ್ಯರು ತಮ್ಮ ಪ್ರವಚನ ನಿಲ್ಲಿಸಿದರು. ಇವರ ಈ ಒಂದು ಅಗಾಧ ಶಕ್ತಿಯನ್ನು ಮೆಚ್ಚಿ ರಾಘವೇಂದ್ರ ಸ್ವಾಮೀಜಿ ತಮ್ಮ ದೈವ ಶಕ್ತಿಯಿಂದ ಅಪ್ಪಣ್ಣಾಚಾರ್ಯರನ್ನು ಮುಟ್ಟಿ ಆಶೀರ್ವದಿಸಿದರು. ಅಂದಿನಿಂದ ಆ ಊರಿಗೆ ಭಿಕ್ಷಾಲಯ, ಬಿಚ್ಚಾಲೆ ಎನ್ನುವ ಹೆಸರು ಬಂತು ಎನ್ನುವುದು ಗ್ರಾಮದ ಇತಿಹಾಸ.

ಈ ಕ್ಷೇತ್ರದಲ್ಲಿ ಅಪ್ಪಣ್ಣಾಚಾರ್ಯರ ಮನೆ ಪ್ರಮುಖ ಆಕರ್ಷಣೆ. ರಾಘವೇಂದ್ರ ಸ್ವಾಮಿಗಳು ಸುಮಾರು 12 ವರ್ಷಗಳ ಕಾಲ ಇದೇ ಮನೆಯಲ್ಲಿ ವಾಸವಿದ್ದರು ಎನ್ನುವ ಪ್ರತೀತಿಯಿದೆ. ಈಗಲೂ ಇಲ್ಲಿ ಆಂಜನೇಯ ಹಾಗೂ

